ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.7741/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮುರ್ತುಜಾ** | | |
| **ತಂದೆಃಹೆಸರು** | **ನಬೀಸಾಬ್** | **ಪಿಡಬ್ಲೂಃ** | **3** |
| **ವಯಸ್ಸು** | **26 ವರ್ಷ** | **ಸಿಡಬ್ಲೂಃ** | **5** |
| **ಉದ್ಯೋಗಃ** | **ಚಾಲಕ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-1, 2 & 4, 6 ರಿಂದ 15 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ.

ದಿ.07-07-2021 ರಂದು ಮ.3 ಗಂಟೆಯ ಸುಮಾರಿಗೆ ಪೋಲೀಸರು ಪಂಚನಾಮೆಗೆಂದು ನನ್ನನ್ನು ಕರೆದುಕೊಂಡು ಹೋಗಿದ್ದರು. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಅಂದರೆ ಆರೋಪಿತರ ಮನೆಯಲ್ಲಿ ಪೋಲೀಸರು ಪಂಚನಾಮೆ ಮಾಡಿದ್ದರು. ಸಾಕ್ಷಿಯು ನಿಪಿ-5 ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತಮ್ಮ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟೀಸು ಕೊಟ್ಟಿದ್ದರು. ನೋಟೀಸು ಕೊಟ್ಟ 1-2 ತಿಂಗಳ ನಂತರ ಪೋಲೀಸರು ನನ್ನನ್ನು ಪಂಚನಾಮೆಗೆ ಕರೆದುಕೊಂಡು ಹೋಗಿದ್ದರು. ಪೋಲೀಸರು ನೀನು ಸ್ಥಳಕ್ಕೆ ಬರಬೇಕೆಂದು ಫೋನ್ ಮಾಡಿ ಹೇಳಿದ್ದರು.

2. ಘಟನಾ ಸ್ಥಳಕ್ಕೆ ಆ ದಿನ ಯಾರು ಯಾರು ಹೋಗಿದ್ದು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-6 ರಲ್ಲಿರುವ ಸ್ಥಳ ಯಾರದ್ದು, ಯಾರ ಹೆಸರಿನಲ್ಲಿದೆ ಎಂದು ನನಗೆ ಅಲ್ಲಿಗೆ ಹೋಗುವ ಪೂರ್ವದಲ್ಲಿ ಗೊತ್ತಿರಲಿಲ್ಲ ಎಂದರೆ ಸರಿ.

3. ಚಾಸಾ-1 ರವರು ನನ್ನ ಸಂಬಂಧಿ ಅಲ್ಲ, ಪರಿಚಯಸ್ಥರು. ಈ ರೀತಿ ಸಾಕ್ಷಿ ಹೇಳುವಂತೆ ಚಾಸಾ-1 ರವರು ನಿಮ್ಮನ್ನು ಕಳಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪೋಲೀಸರು ಠಾಣೆಗೆ ನಿಮ್ಮನ್ನು ಕರೆಸಿದ್ದಾಗ ನಿಪಿ-5 ಕ್ಕೆ ಸಹಿ ಪಡೆದಿದ್ದರು ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ಮಾಡಿದ್ದೆ, ಆ ಕಾಲಕ್ಕೆ ಆ ದಾಖಲೆ ಖಾಲಿ ಇತ್ತು ಎನ್ನುತ್ತಾರೆ.

**ಮರು ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

ನಿಪಿ-5 ದಾಖಲೆ ಆ ಕಾಲಕ್ಕೆ ಬಿಳಿ ಹಾಳೆ ಇರಲಿಲ್ಲ, ಅದರಲ್ಲಿ ಬರೆದಿದ್ದನ್ನು ನಿಮಗೆ ಓದಿ ಹೇಳಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀಸವಾಲು: ಆರೋಪಿ ಪರ ವಕೀಲರಿಂದ:**

5. ಅವರು ಯಾವ ಪೋಲೀಸರು ಎಂದು ನನಗೆ ಮಾಹಿತಿ ಇಲ್ಲ. ಸಹಿ ಮಾಡಿಸಿಕೊಂಡ ಪೋಲೀಸರು ಯಾರು ಎಂದು ಹೇಳಲು ಅವರ ಹೆಸರು ನನಗೆ ಗೊತ್ತಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**